

ಸ್ಪೇನ್‌ನ ರಫಾಲ್ ನಡಾಲ್ ಹಾಗೂ ಭಾರತದ ವಿರಾಟ್ ಕೊಹ್ಲಿ ವಿಶ್ವ ಕ್ರೀಡಾ ನಕಾಶೆಯಲ್ಲಿ ಮಿಂಚುತ್ತಿರುವ ಹೆಸರುಗಳು. ಇಬ್ಬರ ಕಣ್ಣುಗಳಲ್ಲಿ ಕನಸುಗಳಿವೆ, ಮಹತ್ವಾಕಾಂಕ್ಷೆ ಇದೆ. ಹಾಗೆಯೇ ಆಕ್ರಮಣಕಾರಿ ಪ್ರವೃತ್ತಿಯೂ ಎದ್ದು ಕಾಣುತ್ತದೆ. ಇತ್ತೀಚಿನ ಆಸ್ಟ್ರೇಲಿಯಾ ಓಪನ್‌ನಲ್ಲಿ ನಡಾಲ್ ವಿರುದ್ಧ ಸೋತ ಗ್ರೀಸ್‌ನ ಸ್ಟೆಫನೋಸ್ ಸಿಸಿಪಸ್ ಮತ್ತೊಬ್ಬ ಯುವತಾರೆ.

# 'ಸೆಲಬ್ರೇಷನ್' ನೆಚ್ಚುಗೆಯ 'ಬಟರ್‌ಫ್ಲೈ ಜನರೇಷನ್'

**'ಹೊಸ** ಸಹಸ್ರಮಾನಿಗಳಲ್ಲಿ ಇರುವ ಮಿತಿಗಳನ್ನೆಲ್ಲ ದಾಟಿ ಇನ್ನೇನೋ ಹೊಸತನ್ನು ಮಾಡುವವರ ಸಂಖ್ಯೆ ನಮ್ಮ ದೇಶದಲ್ಲಿ ತುಂಬಾ ಕಡಿಮೆ' ಎನ್ನುತ್ತಲೇ ಮನೋವಿಜ್ಞಾನಿ ಹಾಗೂ ಸಲಹೆಗಾರ ಡಾ. ಎಂ. ಶ್ರೀಧರಮೂರ್ತಿ ತಾವು ಗಮನಿಸಿದ್ದನ್ನು ಹಂಚಿಕೊಳ್ಳಲಾರಂಭಿಸಿದರು. ಅವರ ಮಾತು ಹೀಗೆ ಮುಂದುವರಿಯಿತು: 'ಧೈರ್ಯ ಇರುವ, ಐಷಾರಾಮ ಕಂಡುಂಡೇ ಬೆಳೆದ ಈ ಮಕ್ಕಳು ಮಾರುಕಟ್ಟೆ ಪ್ರಣೀತರು. ಹಿಂದಿನವರಂತೆ ನಾಚಿಕೆ, ಬಿಗುಮಾನಗಳಿಲ್ಲ. ಬಯಕೆ ತೋಟದ ಬೇಲಿ ಜಿಗಿಯಲು ಹವಣಿಸುವ ಮನಸ್ಸು ಅವರದ್ದು. ಅತಿ ವೇಗ. ಎಲ್ಲವೂ ಅಪ್ರಸ್ತುತ ಎನ್ನಿಸುವ ಸ್ಥಿತಿಯನ್ನೂ ಹೆಚ್ಚೇ ಲಗುಬಗೆಯಲ್ಲಿ ಮುಟ್ಟಿಬಿಡುತ್ತಾರೆ. ಸ್ವರತಿ ಅಥವಾ ಆತ್ಮರತಿ ಅಂಥವರಲ್ಲಿ ಸಹಜ. ಆದರೆ, ಅವರು ಹಿಪಾಕ್ರೆಟ್ಸ್ ಅಲ್ಲ. ಆಶಾವಾದ, ಆತ್ಮಬಲ ಕಡಿಮೆ. ಭವಿಷ್ಯದ ನಂಬಿಕೆ ವಿಷಯ ಬಂದಾಗ ನಿಂತಲ್ಲೇ ನಿಂತುಬಿಟ್ಟಂತೆ ಭಾಸವಾಗುತ್ತಾರೆ.'

ಮಲ್ಟಿಪ್ಲೆಕ್ಸ್ ಶಕೆಯ ಈ ಮಕ್ಕಳು ಕೊಳ್ಳುಬಾಕರು. ಇದು 'ಬಟರ್‌ಫ್ಲೈ ಜನರೇಷನ್'. ಉಡಾಳತೆ ಇಲ್ಲ. ಪ್ರಶ್ನೆಗಳನ್ನು ಕೇಳುವಾಗ ಖುಷಿಯೆನಿಸುತ್ತದೆ. ರೋಡೀಸ್, ರಿಯಾಲಿಟಿ ಷೋಗಳನ್ನು ನೋಡಿ ಬೆಳೆದವರು. ಬಗೆ ಬಗೆಯ ಭಾಷೆ–ಸಂಸ್ಕೃತಿಗಳೊಳಗೆ ಸಲೀಸಾಗಿ ನುಸುಳಬಲ್ಲರು. ಕನ್ನಡದ ನಡುವೆ 'ಮಚ್ಚಾ' ಎಂಬ ಪದವಿಟ್ಟು ನಗಬಲ್ಲರು. ಇಂಗ್ಲಿಷ್ ಮೇಲೋಗರಕ್ಕೆ 'ಅಚ್ಚಾ' ಎಂದು ಹಿಂದಿ ಅಗುಳ ಬೆರೆಸಿ ಕಣ್ಣರಳಿಸಬಲ್ಲರು.

ಹಳೆಯ ತಲೆಮಾರಿನವರಿಗೆ ಸಣ್ಣ ಸಣ್ಣ ಪುಳಕಗಳಿದ್ದವು. ಸಹಪಾಠಿ ಊಟಕ್ಕೆ ಕರೆದರೆ ಮೈಜುಮ್ಮೆನ್ನುತ್ತಿದ್ದ ಕಾಲವದು. ಹುಡುಗಿ ಪಕ್ಕದಲ್ಲಿ ಕುಳಿತುಕೊಳ್ಳುವ ಅವಕಾಶಕ್ಕಾಗಿ ಚಾತಕಪಕ್ಷಿಗಳಾಗುತ್ತಿದ್ದ ಯುವಮನಗಳ ಕಾಲ. ಈಗ ಹೆಣ್ಣಿನ ಸ್ಪರ್ಶದಿಂದ ಅಂಥ ಕಂಪನವೇ ಕಾಣುವುದಿಲ್ಲ. ಪೋರ್ನೋಗ್ರಫಿಯನ್ನು ಮನದಣಿಯೆ ನೋಡಿದವರಿಗೆ ಅದರ ಪುಳಕದ ನಿಜಾರ್ಥ ಹೇಗೆತಾನೆ ಅರಿವಿಗೆ ಬಂದೀತು?

ಸಹಸ್ರಮಾನಿಗಳಿಗೆ ಬೇಗ ಶ್ರೀಮಂತರಾಗುವ ಬಯಕೆ. 20 ಸಾವಿರ ಕೋಟಿ ರೂಪಾಯಿ ಷೇರು ವಹಿವಾಟು ನಡೆಯುವ ದೇಶ ನಮ್ಮದೆನ್ನುವುದೇ ಇದಕ್ಕೆ ಸಾಕ್ಷಿ. ನುಗ್ಗಿ ಪಡೆಯಬೇಕೆಂಬ ಕಥನವ ಮನಕ್ಕಿಳಿಸಿಕೊಂಡವರು. ಯಶಸ್ವಿ ಯುವಕರ ಅಂಥ ಕಥನಗಳು ಅವರಿಗೆ ಮನದಟ್ಟಾಗಿವೆ. ಉದ್ಯಮಶೀಲತೆ, ವ್ಯಾಪಾರಿ ಸೃಜನಶೀಲತೆಯ ಸೂಕ್ಷ್ಮಗಳೂ ಗೊತ್ತು. ಬೇರೆ ಬೇರೆ ಲ್ಯಾಂಡ್‌ಸ್ಕೇಪ್‌ಗಳಿಗೆ ಪ್ರಯಾಣ ಮಾಡಿ ಸುಖವುಣ್ಣುವ ಹಂಬಲ. ಅದಕ್ಕೇ ಬೈಕು, ಕಾರುಗಳ ಭರಾಟೆ. ಸಾವಿರಾರು ಕಿ.ಮೀ. ದೂರದ ಊರುಗಳ ಕಥನ ಕೇಳಿ ಕಿವಿಯಗಲಿಸುತ್ತಿದ್ದ ಕಾಲ ಹಳೆಯದ್ದು. 'ಅಲ್ಲಿಗಾ... ನಾವೆಲ್ಲ ಬೈಕರ್‌ಗಳು ಹೋಗಿ ಬಂದರಾಯಿತು' ಎನ್ನುವುದು ಹೊಸಕಾಲದ ನುಡಿಗಟ್ಟು. ಸಂಪಾದಿಸುವುದೇ ಖರ್ಚು ಮಾಡಲು ಎನ್ನುವ ಧೋರಣೆ ಮುಂದು. ಉಳಿತಾಯಕ್ಕಿಂತ ಹೂಡಿಕೆಯ ದಾರಿಗಳೇ ಮುಖ್ಯ. ಇದು ನಗರದ ಸಹಸ್ರಮಾನಿಗಳ ಮೇಲುನೋಟದ ಗುಣಲಕ್ಷಣ.

ಇನ್ನೊಂದು ಕಡೆ ಸಹಸ್ರಮಾನಿಗಳಲ್ಲೇ ಕಂದಕವಿದೆ. ಹೊಸ ಸಾಮಾಜಿಕ ಗುಂಡಿಗಳವು – ಕಣ್ಣಿಗೆ ಕಾಣುವುದೇ ಇಲ್ಲ. 'ಡೆಕಥ್ಲಾನ್'ನಲ್ಲಿ ಕೆಲಸ ಮಾಡುವ ಹುಡುಗರ ನಡುವೆ ಎಂಜಿನಿಯರಿಂಗ್ ಪದವೀಧರ ಇದ್ದಾನೆ. ಮದುವೆಮನೆಯಲ್ಲಿ ಊಟ ಬಡಿಸುವ ಹೊಳೆವ ಕೆನ್ನೆಯ ಯುವಕ ಕೂಡ ತಂತ್ರಜ್ಞ. ಎರಡು ಮೂರು ಅರೆಕಾಲಿಕ ವೃತ್ತಿಗಳನ್ನು ಮಾಡಿಕೊಂಡು, ನಗರದಲ್ಲಿನ ಅನಿಶ್ಚಿತ ಖರ್ಚು ತೂಗಿಸಿಕೊಂಡು ಹೋಗುತ್ತಲೇ ಹೊಸ ಕನಸುಗಳನ್ನು ನೇವರಿಸುವ ಹುಡುಗರೂ ಇಲ್ಲುಂಟು.

ಮಿಲೇನಿಯಲ್‌ಗಳಲ್ಲಿ ಬೋಲ್ಡ್‌ನೆಸ್ ಅಥವಾ ದಿಟ್ಟತನವಿದೆ. ಆದರೆ, ಅದಕ್ಕೆ ತಮ್ಮದೇ ಆದ ಪೇಟೆಂಟ್ ಹೊಂದಲು ಅವರಿಗೆ ಸಾಧ್ಯವಾಗುತ್ತಿಲ್ಲ. 'ಫ್ಯೂಷನ್' ಪ್ರಯೋಗಗಳು ಬಹುಮುಖಿ ಕ್ಷೇತ್ರಗಳಲ್ಲಿ ನಡೆಯುತ್ತಿವೆ. ಸಂಗೀತದಲ್ಲಂತೂ ಅದು ಎದ್ದುಕಾಣುತ್ತದೆ. ಆದರೂ ಸೋಲಿನ ಭಯ ಅವರನ್ನು ಹೆಚ್ಚಾಗಿ ಕಾಡುತ್ತಿಲ್ಲವೆನ್ನುವುದು ವಿಶೇಷ. ಕಂಪ್ಯೂಟರ್ ಕೂಡ ಅಪ್ರಸ್ತುತವೆನ್ನಿಸುವಂತೆ ಅವರು ನೋಟ ಬೀರಬಲ್ಲರು. ಪ್ರಯೋಗಾಲಯಗಳಲ್ಲಿ ಅಡುಗೆ ಮಾಡುವ ಯಂತ್ರ ತಯಾರಿಸಿ ಚಕಿತಗೊಳಿಸಿದವರೂ ಅವರೇ.

ಹೆಣ್ಣುಮಕ್ಕಳೂ ತಮ್ಮ ದೃಢ ನಿರ್ಧಾರಗಳಿಂದ ಮುಂದಡಿ ಇಡುತ್ತಿದ್ದಾರೆ. ಮದುವೆಯೇ ಆಗದೆ ಮಗುವನ್ನು ದತ್ತು ತೆಗೆದುಕೊಂಡು ಸಾಕುತ್ತಾರೆ. ಸಮಾರಂಭದ ಊಟಕ್ಕೆ ಇಟ್ಟ ಪ್ಲಾಸ್ಟಿಕ್ ಬಾಟಲಿಯಲ್ಲಿ ಸುತರಾಂ ನೀರು ಕುಡಿಯುವುದೇ ಇಲ್ಲವೆಂಬ ಸಂಕಲ್ಪ ಮಾಡಿದವರು...

ಅದೋ ಅಲ್ಲಿ. ಜಾತಿ–ಧರ್ಮಗಳ ಸಂಕೋಲೆ ಮೀರಿ ಮದುವೆಗಳನ್ನಾದವರು, ಮಕ್ಕಳೇ ಬೇಡವೆಂದು ತಮ್ಮ ಪಾಡಿಗೆ ತಾವು ಇರುವ ತೀರ್ಮಾನ ತೆಗೆದುಕೊಂಡವರು... ಹೀಗೆ ಪರಿ ಪರಿ ಮನೋನಿಶ್ಚಯಗಳ ನಡುವೆ ಬೆರಳ ತುದಿಯ ಇಂಟರ್ನೆಟ್ ಜ್ಞಾನದ ಪರಿಧಿಯನ್ನು ಹಿರಿದಾಗಿಸಿದೆ. ಸಂಭಾಷಣೆಗಳ ಮೂಲಕ ಅವರು ಚರ್ಚೆಯಲ್ಲಿ ತೊಡಗುವುದು ನೋಡಲು ಚೆನ್ನ. ಹಳೆಯ ಕಾಲದಲ್ಲಿ ಪೌಡರ್ ಒರೆಸಲು ಬಳಸುವ ಪಫ್‌ನಂತೆ ನೆತ್ತಿಮೇಲೆ ಜುಟ್ಟು ಬಿಟ್ಟ ಸ್ನೇಹಿತನನ್ನು ವಿಚಿತ್ರವಾಗಿ ನೋಡುತ್ತಿದ್ದೆವು. ಈಗ ಅದೇ ಬಹುತೇಕ ಯುವಕರ ಕೇಶವಿನ್ಯಾಸ. ನೋಡಲು ಚೆಂದ ಕಾಣಿಸಲೇಬೇಕು ಎನ್ನುವುದು ಮುಖ್ಯ. ಪ್ರತಿಷ್ಠಿತ ಶಾಲಾ ವಾರ್ಷಿಕೋತ್ಸವವನ್ನು ಪೊಲೀಸ್ ಭದ್ರತೆಯಲ್ಲಿ ನಡೆಸಬೇಕಾದ ದುಃಸ್ಥಿತಿ. 'ಸೆಲೆಬ್ರೇಷನ್ ಆಫ್ ಯೂತ್'ನ ಬಹುಮುಖಗಳು ಇವು. ಹೀಗಿದ್ದೂ, ಅಭದ್ರತೆ ಕಾಡುತ್ತಿರುವ ಯುವಕರ ಸಂಖ್ಯೆ ಈಗ ಹಿಂದಿಗಿಂತ ಹೆಚ್ಚು. ಆಹಾರ ಪದ್ಧತಿ ಕ್ರಮ ತಪ್ಪಿರುವುದು ಇನ್ನೊಂದು ಆತಂಕ. ಮೂಳೆಮುರಿದ ಸ್ಥಿತಿಯಲ್ಲಿ ಸಂಬಂಧಗಳು ಇರಲೂ ಹೊಸಮನಸ್ಥಿತಿಗಳೇ ಕಾರಣ. ಸಾಂಪ್ರದಾಯಿಕ ಸಾಂಸ್ಥಿಕ ವ್ಯವಸ್ಥೆಗೆ ಇವರದ್ದು ಧಿಕ್ಕಾರ. ಸಿದ್ಧಾಂತ ಮಾತನಾಡಿದರೆ ನಖಶಿಖಾಂತ ಸಿಟ್ಟು. ಒಟ್ಟಿನಲ್ಲಿ ಇದು ಅಸಹನೀಯ ತಲೆಮಾರು.